ಅನುಬಂಧ – I

G.T.T.C ಕೇಂದ್ರ ಮದ್ದೂರು ಇದರ ಕಟ್ಟಡ ನಿರ್ಮಾಣ :

436 (5116) ಶ್ರೀ ತಮ್ಮಣ್ಣ ಡಿ.ಸಿ. (ಮದ್ದೂರು) :– ಮಾನ್ಯ ಭಾರಿ, ಮಧ್ಯಮ ಮತ್ತು ಸಣ್ಣ ಕೈಗಾರಿಕೆಗಳು ಮತ್ತು ಮೂಲಭೂತ ಸೌಲಭ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮದ್ದೂರು ತಾಲ್ಲೂಕು ಮದ್ದೂರು ಪಟ್ಟಣದಲ್ಲಿ ಜಿ.ಟಿ.ಟಿ.ಸಿ. ಕೇಂದ್ರ ಕಟ್ಟಡ ನಿರ್ಮಿಸಲು, ಈಗಾಗಲೇ ಆಡಳಿತಾತ್ಮಕ ಮಂಜೂರಾತಿ ನೀಡಿ 2 ವರ್ಷವಾಗಿದ್ದು ಕಟ್ಟಡ ನಿರ್ಮಾಣಕ್ಕೆ ಅನುದಾನ ಒದಗಿಸಲು ಸರ್ಕಾರ ಯಾವ ಕ್ರಮಕೈಗೊಂಡಿದೆ;

ಆ) ಸದರಿ ಕಟ್ಟಡ ನಿರ್ಮಾಣವನ್ನು ಕೈಗೆತ್ತಿಕೊಳ್ಳಲು ಸರ್ಕಾರದ ನಿಲುವೇನು?

ಶ್ರೀ ಪಿ.ಜಿ. ಆರ್ ಸಿಂಧ್ಯಾ (ಭಾರಿ, ಮಧ್ಯಮ ಮತ್ತು ಸಣ್ಣ ಕೈಗಾರಿಕೆಗಳು ಮತ್ತು ಮೂಲಭೂತ ಸೌಲಭ್ಯ ಸಚಿವರು)

ಅ) ಮದ್ದೂರು ತಾಲ್ಲೂಕಿನ ಸೋಮನಹಳ್ಳಿ ಗ್ರಾಮದಲ್ಲಿರುವ ಕೃಷಿ ಇಲಾಖೆಗೆ ಸೇರಿದ 5.00 ಎಕರೆ ಪ್ರದೇಶವನ್ನು ಕೃಷಿ ಮತ್ತು ತೋಟಗಾರಿಕೆ ಇಲಾಖೆಯು ಸರ್ಕಾರಿ ಆದೇಶ ದಿನಾಂಕ 23.11.2002ರಲ್ಲಿ ಸರ್ಕಾರಿ ಉಪಕರಣಗಾರ ಮತ್ತು ತರಬೇತಿ ಸಂಸ್ಥೆ ಇವರಿಗೆ ಹಸ್ತಾಂತರಿಸಲಾಗುತ್ತದೆ. ಸದರಿ ಜಾಗದಲ್ಲಿ ಕೇಂದ್ರದ ಆಡಳಿತ ಕಟ್ಟಡ, ಅಧ್ಯಯನ ಕೊಠಡಿ, ವರ್ಕ್ ಶಾಪ್ ಇತ್ಯಾದಿ ಕಟ್ಟಡ ನಿರ್ಮಾಣಕ್ಕಾಗಿ ದಿನಾಂಕ 28.2.2004 ರಂದು ಆಡಳಿತಾತ್ಮಕ ಅನುಮೋದನೆ ನೀಡಿದ್ದರು ಸಹ ಅನುದಾನ ಒದಗಿಸದೆಯಿರುವುದರಿಂದ ಕಟ್ಟಡ ನಿರ್ಮಾಣದ ಕಾಮಗಾರಿ ಪ್ರಾರಂಭಿಸಲು ಸಾಧ್ಯವಾಗಿರುವುದಿಲ್ಲ. ಆದರೆ 2005–06ನೇ ಸಾಲಿನಲ್ಲಿ ಕಟ್ಟಡದ ಕಾಮಗಾರಿ ಕೆಲಸವನ್ನು ಪ್ರಾರಂಭಿಸಲಾಗುವುದು.

ಆ) 2005–06ನೇ ಸಾಲಿನಲ್ಲಿ ಕಟ್ಟಡದ ಕಾಮಗಾರಿ ಕೆಲಸವನ್ನು ಪ್ರಾರಂಭಿಸಲಾಗುವುದು.

ಪಶುವೈದ್ಯ ಆಸ್ಪತ್ರೆಗಳನ್ನು ಹೊಸದಾಗಿ ತೆರೆಯುವುದು :

437 (5265) ಶ್ರೀ ಕಿರಣ್ ಕುಮಾರ್ ಕೆ.ಎಸ್. (ಕಳ್ಳಂಬೆಳ್ಳ) :– ಮಾನ್ಯ ಪಶುಸಂಗೋಪನೆ ಮತ್ತು ವಕ್ಫ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತುಮಕೂರು ಜಿಲ್ಲೆಯಲ್ಲಿರುವ ಒಟ್ಟು ಪಶುವೈದ್ಯಕೀಯ ಆಸ್ಪತ್ರೆಗಳು ಮತ್ತು ಚಿಕಿತ್ಸಾ ಕೇಂದ್ರಗಳು ಎಷ್ಟು; (ತಾಲ್ಲೂಕುವಾರು ಮಾಹಿತಿ ನೀಡುವುದು);

ಆ) ಈ ಸಾಲಿನಲ್ಲಿ ಹೊಸದಾಗಿ ಪಶು ಚಿಕಿತ್ಸಾ ಕೇಂದ್ರಗಳು ಮತ್ತು ಪಶು ವೈದ್ಯಕೀಯ ಆಸ್ಪತ್ರೆಗಳನ್ನು ಮಂಜೂರು ಮಾಡಲು ಸರ್ಕಾರ ಯಾವ ಕ್ರಮಕೈಗೊಂಡಿದೆ;

ಇ) ತುಮಕೂರು ಜಿಲ್ಲೆಗೆ ಎಷ್ಟು ಪಶುವೈದ್ಯಕೀಯ ಆಸ್ಪತ್ರೆಗಳು ಮತ್ತು ಪಶುಚಿಕಿತ್ಸಾ ಕೇಂದ್ರಗಳನ್ನು ಮಂಜೂರು ಮಾಡಲಾಗುವುದು;

ಈ) ಕಳ್ಳಂಬೆಳ್ಳ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿರುವ ಪಶು ವೈದ್ಯಕೀಯ ಆಸ್ಪತ್ರೆಗಳು ಮತ್ತು ಚಿಕಿತ್ಸಾ ಕೇಂದ್ರಗಳಲ್ಲಿ ಖಾಲಿ ಇರುವ ಸಿಬ್ಬಂದಿಗಳ ಸಂಖ್ಯೆ ಎಷ್ಟು;

ಉ) ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ಯಾವ ಕ್ರಮ ಕೈಗೊಳ್ಳಲಾಗಿದೆ?

ಶ್ರೀ ಮೆರಾಜುದ್ದೀನ್ ಎನ್. ಪಟೇಲ್ (ಪಶುಸಂಗೋಪನೆ ಮತ್ತು ವಕ್ಫ್ ಸಚಿವರು):

ಅ) ತುಮಕೂರು ಜಿಲ್ಲೆಯಲ್ಲಿ ಒಟ್ಟು 225 ಪಶುವೈದ್ಯಕೀಯ ಸಂಸ್ಥೆಗಳಿದ್ದು, ತಾಲ್ಲೂಕುವಾರು ವಿವಿಧ ಪಶುವೈದ್ಯಕೀಯ ಸಂಸ್ಥೆಗಳ ವಿವರಗಳನ್ನು ಅನುಬಂಧ – 1 ರಲ್ಲಿ ನೀಡಲಾಗಿದೆ.

ಆ) ಸರ್ಕಾರಿ ಆದೇಶ ಸಂಖ್ಯೆ : ಪಸಂಮೂ 111 ಪಸಸೆ 1999 ದಿನಾಂಕ : 20–11–2000ರ ಪ್ರಕಾರ, ಹಾಲಿ ಇರುವ ಪ್ರಾಥಮಿಕ ಪಶು ಚಿಕಿತ್ಸಾ ಕೇಂದ್ರಗಳನ್ನು ಪಶು ಚಿಕಿತ್ಸಾಲಯಗಳನ್ನಾಗಿ ಮೇಲ್ದರ್ಜೆಗೇರಿಸಲು ಅವಕಾಶವಿದೆ ಆದ್ದರಿಂದ ಹೊಸ ಪಶುವೈದ್ಯಕೀಯ ಸಂಸ್ಥೆಗಳನ್ನು ಮಂಜೂರು ಮಾಡುವ ಅವಕಾಶವಿರುವುದಿಲ್ಲ.

ಗುಬ್ಬಿ ತಾಲ್ಲೂಕಿನ ಹಾಗವಾಡಿ, ಕೊರಟಗೆರೆ ತಾಲ್ಲೂಕಿನ ಐ.ಕೆ. ಕಾಲೋನಿ ಹಾಗೂ ತುರುವೇಕೆರೆ ತಾಲ್ಲೂಕಿನ ಮುತ್ತುಸಾದಹಳ್ಳಿ ಪ್ರಾಥಮಿಕ ಪಶು ಚಿಕಿತ್ಸಾ ಕೇಂದ್ರಗಳನ್ನು ಪಶು ಚಿಕಿತ್ಸಾಲಯಗಳನ್ನಾಗಿ ಮೇಲ್ದರ್ಜೆಗೇರಿಸಲು ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿದೆ.

ಡಾ॥ ಡಿ.ಎಂ. ನಂಜುಂಡಪ್ಪ ಸಮಿತಿಯ ಶಿಫಾರಸ್ಸಿನ್ವಯ 69 ಪಶುಚಿಕಿತ್ಸಾಲಯಗಳನ್ನು ರಾಜ್ಯದ 39 ಅತೀ ಹಿಂದುಳಿದ ತಾಲ್ಲೂಕುಗಳಲ್ಲಿ ಅವಶ್ಯಕತೆ ಮೇರೆಗೆ ಮಂಜೂರು ಮಾಡಲಾಗುತ್ತಿದೆ.

ಇ) ಉದ್ಭವಿಸುವುದಿಲ್ಲ.

ಈ) ಕಳ್ಳಂಬೆಳ್ಳ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿರುವ ಪಶು ವೈದ್ಯಕೀಯ ಆಸ್ಪತ್ರೆಗಳಲ್ಲಿ ಮತ್ತು ಪಶು ಚಿಕಿತ್ಸಾ ಕೇಂದ್ರಗಳಲ್ಲಿ ಒಟ್ಟು 20 ಹುದ್ದೆಗಳು ಖಾಲಿ ಇದ್ದು ಖಾಲಿ ಇರುವ ಸಿಬ್ಬಂದಿಗಳ ವಿವರ ಕೆಳಕಂಡಂತಿದೆ.

1	ಪಶುವೈದ್ಯಾಧಿಕಾರಿಗಳು	3
2	ಪಶುವೈದ್ಯಕೀಯ ಮೇಲ್ಚಿಚಾರಕರು	1
3	ಹಿರಿಯ ಪಶುವೈದ್ಯಕೀಯ ಪರೀಕ್ಷಕರು	4
4	ಪಶುವೈದ್ಯಕೀಯ ಪರೀಕ್ಷಕರು	2

5	ಪಶುವೈದ್ಯಕೀಯ ಸಹಾಯಕರು	7
6	ಡಿ ದರ್ಜೆ	3
	ಒಟ್ಟು	**20**

ಉ) ಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿದ್ದ 191 ಪಶುವೈದ್ಯಾಧಿಕಾರಿಗಳ ಸೇವೆಯನ್ನು ಸರ್ಕಾರದ ಆದೇಶ ಸಂಖ್ಯೆ : ಪಸಂಮೀ : 116 : ಪಸಸೇ : 2003 : ದಿನಾಂಕ : 30–05–05 ರಲ್ಲಿ ಸಕ್ರಮಗೊಳಿಸಲಾಗಿದೆ.

250 ಪಶುವೈದ್ಯಾಧಿಕಾರಿಗಳನ್ನು ವಿಶೇಷ ನೇರ ನೇಮಕಾತಿಯ ನಿಯಮದಡಿ ಭರ್ತಿ ಮಾಡುವ ಪ್ರಕ್ರಿಯೆ ಅಂತಿಮ ಹಂತದಲ್ಲಿರುತ್ತದೆ.

ಪಶುವೈದ್ಯಕೀಯ ಮೇಲ್ವಿಚಾರಕರನ್ನು, ಹಿರಿಯ ಪಶುವೈದ್ಯಕೀಯ ಪರೀಕ್ಷಕರ ಹುದ್ದೆಗಳನ್ನು ಮುಂಬಡ್ತಿಯ ಮೂಲಕ ಭರ್ತಿ ಮಾಡಬೇಕಾಗಿದ್ದು ಇಲಾಖಾ ಮುಂಬಡ್ತಿ ಸಭೆ ದಿನಾಂಕ : 29–06–2005 ರಂದು ನಡೆಸಲಾಗಿದೆ. ಪಶುವೈದ್ಯಕೀಯ ಪರೀಕ್ಷಕರನ್ನು 50 : 50 ಅನುಪಾತದಲ್ಲಿ ನೇರ ನೇಮಕಾತಿ ಹಾಗೂ ಮುಂಬಡ್ತಿ ಮೂಲಕ ಭರ್ತಿ ಮಾಡುವ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿದೆ.

150 ಪಶುವೈದ್ಯಕೀಯ ಸಹಾಯಕರನ್ನು ಪಶುವೈದ್ಯಕೀಯ ಪರೀಕ್ಷಕರಾಗಿ ಮುಂಬಡ್ತಿ ನೀಡುವ ಪ್ರಕ್ರಿಯೆ ಅಂತಿಮ ಹಂತದಲ್ಲಿರುತ್ತದೆ.

1384 ಡಿ ದರ್ಜೆ ನೌಕರರನ್ನು ಬೇರೆ ಇಲಾಖೆಗಳಿಂದ ಮರುವಿನ್ಯಾಸದ ಮೂಲಕ ಹಾಗೂ ಅನುಕಂಪಾರ್ಥದ ನೌಕರಿಯ ಮೂಲಕ ಭರ್ತಿ ಮಾಡಲಾಗುತ್ತಿದೆ.

ಅನುಬಂಧ – I ಪ್ರಶ್ನೆ ಸಂಖ್ಯೆ : 5265

ಕ್ರ.ಸಂ.	ತಾಲ್ಲೂಕು	ಪಪ ಆಸ್ಪತ್ರೆ	ಪಶು ಚಿಕಿತ್ಸಾಲಯ	ಪ್ರಾಥಮಿಕ ಪಶು ಚಿಕಿತ್ಸಾಲಯ	ಕೃತಕ ಗರ್ಭಧಾರಣಾ ಕೇಂದ್ರ	ಪ್ರಾಯೋಗ ಗ್ರಾಮೀಣ ಅಭಿವೃದ್ಧಿ ಯೋಜನೆ	ಸಂಚಾರಿ ಪಶು ಚಿಕಿತ್ಸಾಲಯ	ಒಟ್ಟು
1	ತುಮಕೂರು	1	12	17	1	0	1	32
2	ಗುಬ್ಬಿ	1	11	11	0	0	1	24
3	ಕುಣಿಗಲ್	2	12	3	0	10	1	28
4	ಕೊರಟಗೆರೆ	2	4	10	2	0	1	19
5	ಮಧುಗಿರಿ	1	10	10	2	0	1	24
6	ತುರುವೇಕೆರೆ	2	6	12	0	0	1	21
7	ತಿಪಟೂರು	1	7	7	0	0	1	16
8	ಪಾವಗಡ	1	5	8	2	0	1	17
9	ಸಿರಾ	3	10	9	2	0	1	25
10	ಚಿಕ್ಕನಾಯಕನಹಳ್ಳಿ	1	7	10	0	0	1	19
	ಒಟ್ಟು	15	84	97	9	10	10	225